SHAHEED GROUP
Wholesale (Broiler)
₹100
Retail (Live)
₹110
With Skin ₹155 | With out Skin ₹190
SHAHEED POULTRY CENTER PVT LTD
NO 25 New Market Road Shivajinagar Bengaluru 560051
: 9900503000 / 9902011888

GOA No.1 ★★★ ಪಾನ್ ಮಸಾಲಾ ★★
25 YEARS OF EXCELLENCE & EXCEPTION WORLD WIDE
ಸುಗಂಧ ಭರಿತ ಹೊಸ ರುಚಿಯಲ್ಲಿ
BUY 2 GET 1 FREE
ನಿಮ್ಮ ಹತ್ತಿರದ ಎಲ್ಲ ಪಾನ್ ಶಾಪ್‌ಗಳಲ್ಲಿ ಲಭ್ಯ

212 ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ

ಬೆಂಗಳೂರು: ಸೀಟ್ ಬ್ಲಾಕಿಂಗ್‌ನಲ್ಲಿ ಸಿಲುಕಿರುವ 212 ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಹೈಕೋರ್ಟ್ ಅವಕಾಶ ಕಲ್ಪಿಸಿದೆ. ಸರ್ಕಾರ ಈ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಮಾಡಿಲ್ಲ.

ಕರೊನಾ ಆರ್ಥಿಕ ನೆರವು ವಿತರಣೆ | 29 ಸಾವಿರ ಅರ್ಜಿ ಪರಿಹರಿಸಲು ಹೆಣಗಾಟ

ಶೇ.90 ಆಟೋ, ಟ್ಯಾಕ್ಸಿ ಚಾಲಕರಿಗೆ ಪ್ಯಾಕೇಜ್

■ ಶ್ರೀಕಾಂತ್ ಶೇಷಾದ್ರಿ ಬೆಂಗಳೂರು

ಆಟೋ ಮತ್ತು ಟ್ಯಾಕ್ಸಿ ಚಾಲಕರಿಗಾಗಿ ರಾಜ್ಯ ಸರ್ಕಾರ ಪ್ರಕಟಿಸಿದ್ದ ಕರೊನಾ ಆರ್ಥಿಕ ಪ್ಯಾಕೇಜ್ ಇನ್ನೂ 29,500 ಮಂದಿಗೆ ತಲುಪಿಲ್ಲ.

ಕರೊನಾ-ಲಾಕ್‌ಡೌನ್ ಕಾರಣದಿಂದ ಸಮಸ್ಯೆಗೊಳಗಾದ ವರ್ಗಕ್ಕೆ ಪರಿಹಾರ ಘೋಷಿಸಲಾಗಿತ್ತು. ಈ ಪೈಕಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಮಾತ್ರ ಒಮ್ಮೆ ಪರಿಹಾರವಾಗಿ 5 ಸಾವಿರ ರೂ. ಪರಿಹಾರ ಧನವನ್ನು ಷರತ್ತಿಗೊಳಪಟ್ಟು ನೀಡಲು ಮಂಜೂರಾತಿ ನೀಡಿ ಆದೇಶಿಸಲಾಗಿತ್ತು.

ಮುಖ್ಯಾಂಶ

- ಷರತ್ತು ಹಾಕಿ, ಸೂಕ್ಷ್ಮವಾಗಿ ದಾಖಲೆ ಪರಿಶೀಲಿಸಿದ್ದರಿಂದ ಅರ್ಹರಿಗೆ ಸಹಾಯಧನ
- 29 ಸಾವಿರ ಅರ್ಜಿಗಳಲ್ಲಿ ಐಡಿ ವ್ಯಾಲಿಡೇಷನ್, ಡಿಬಿಟಿ ಸಮಸ್ಯೆ
- ಶೇ.90 ಅರ್ಜಿದಾರರಿಗೆ ಪರಿಹಾರ ವಿತರಣೆ ಯಶಸ್ವಿ

ಈ ಸಂಬಂಧ 2020ರ ಮೇ 16, ಜೂನ್ 10 ಮತ್ತು ಆಗಸ್ಟ್ 4ರಂದು ಆದೇಶಗಳು ಹೊರಬಿದ್ದಿದ್ದು, 117.51 ಕೋಟಿ ರೂ. ಸಹಾಯಧನ ಬಿಡುಗಡೆ ಮಾಡಲಾಗಿತ್ತು. ಸೇವಾ ಸಿಂಧು ವೆಬ್ ಪೋರ್ಟಲ್‌ನಲ್ಲಿ ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ಪರಿಹಾರ ಧನ ಕೋರಿ ಸಲ್ಲಿಸಿದ್ದ ಅರ್ಹ ಫಲಾನುಭವಿಗಳ ಖಾತೆಗೆ ಡಿಬಿಟಿ (ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್) ಮೂಲಕ ನೇರವಾಗಿ ಜಮಾ ಮಾಡಲಾಗಿದೆ.

ಒಟ್ಟು ಅರ್ಜಿಗಳು 2,45,852 ಸ್ವೀಕೃತವಾಗಿದ್ದು, ಈ ಪೈಕಿ 2,15,612 ಫಲಾನುಭವಿಗಳಿಗೆ 5 ಸಾವಿರ ರೂ.ನಂತೆ ಪರಿಹಾರ ವಿತರಿಸಲಾಗಿದೆ. ಚಾಲನಾ ಅನುಜ್ಞಾ ಪತ್ರ ಮತ್ತು ಆಧಾರ್ ಕಾರ್ಡಿನ ವಿವರಗಳಲ್ಲಿ ಹೊಂದಾಣಿಕೆ ಇಲ್ಲದ ಕಾರಣ 2,507 ಅರ್ಜಿ ತಿರಸ್ಕೃತಗೊಂಡಿದ್ದರೆ, 2,676 ಅರ್ಜಿ ಇನ್ನೂ ವಿವಿಧ ಹಂತದ ಪರಿಶೀಲನಾ ಹಂತದಲ್ಲಿದೆ. ಗುರುತಿನ ಚೀಟಿ ಅರ್ಹತಾ ದಿನಾಂಕದ ಅನುತ್ತೀರ್ಣ, ಡಿಬಿಟಿ ಅನುತ್ತೀರ್ಣದಿಂದ 25,057 ಅರ್ಜಿ ಬಗೆಹರಿಸುವುದು ಸರ್ಕಾರಕ್ಕೆ ತಲೆ ನೋವಾಗಿ ಪರಿಣಮಿಸಿದೆ. ಆದರೂ ಪ್ರಯತ್ನ ನಿಲ್ಲಿಸಿಲ್ಲ.

ಐಡಿ ವ್ಯಾಲಿಡೇಷನ್ ಅನುತ್ತೀರ್ಣ ತಾಂತ್ರಿಕ ಸಮಸ್ಯೆಯಿಂದ ಅಥವಾ ಫಲಾನುಭವಿಗಳ ಬ್ಯಾಂಕ್ ಖಾತೆಗಳು ಚಾಲ್ತಿಯಲ್ಲಿ ಇಲ್ಲದ ಕಾರಣ, ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆ ಜೋಡಣೆ ಆಗದಿರುವ ಹಿನ್ನೆಲೆ ಪರಿಹಾರ ಧನ ವಿತರಿಸಲು ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಬಾಕಿ ಉಳಿದಿರುವ ಅರ್ಜಿದಾರರಿಗೆ ಪರಿಹಾರ ಧನ ವಿತರಿಸುವ ಸಂಬಂಧ ಹೆಚ್ಚುವರಿ ಬ್ಯಾಂಕ್ ಖಾತೆಯ ಮಾಹಿತಿ ದಾಖಲಿಸುವುದು ಅವಶ್ಯಕ, ಸೇವಾ ಸಿಂಧು ಪೋರ್ಟಲ್‌ನಲ್ಲಿ ಹೆಚ್ಚುವರಿ ಬ್ಯಾಂಕ್ ಖಾತೆಯ ಮಾಹಿತಿಯನ್ನು ದಾಖಲಿಸುವ ಮೂಲಕ ಪರಿಹಾರ ಧನ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಾರಿಗೆ ಇಲಾಖೆ ಹೇಳಿದೆ. ಎಲ್ಲಾ ಅರ್ಜಿದಾರರಿಗೆ ಅವರ ಹೆಚ್ಚುವರಿ ಬ್ಯಾಂಕ್ ಖಾತೆಗಳನ್ನು ಸೇವಾಸಿಂಧು ಪೋರ್ಟಲ್‌ನಲ್ಲಿ ದಾಖಲಿಸುವಂತೆ ಕೋರಿ ಎರಡು ಬಾರಿ ಅವಕಾಶ ನೀಡಲಾಗಿತ್ತು. ಎಸ್‌ಎಂಎಸ್ ಮೂಲಕ ಸಂದೇಶ ರವಾನಿಸಿದ್ದು, ಹಲವಾರು ಮಂದಿ ಮಾಹಿತಿ ನೀಡಿದ್ದಾರೆ. ಇದೀಗ ಸ್ವೀಕೃತವಾದ ಮಾಹಿತಿಯನ್ನು ಪರಿಶೀಲಿಸಿ ಪರಿಹಾರ ವಿತರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಎಲ್ಲ ಅರ್ಜಿಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕವೇ ಸ್ವೀಕರಿಸುವುದು, 2020ರ ಮಾರ್ಚ್ 24ರಂದು ಚಾಲನೆ ಪರವಾನಗಿ ಪ್ರಮಾಣ ಪತ್ರ ಹೊಂದಿರುವ ಆಟೋ, ಟ್ಯಾಕ್ಸಿ ಚಾಲಕರಿಗೆ ಮಾತ್ರ ಯೋಜನೆ ಅನ್ವಯಿಸುವುದು, ಆಧಾರ್ ಕಾರ್ಡ್, ಚಾಲನಾ ಪರವಾನಗಿ, ವಾಹನ ನೋಂದಣಿ ಸಂಖ್ಯೆ ಮೂರು ಅಂಶಗಳು ಎಲ್ಲ ಫಲಾನುಭವಿಗಳಿಗೆ ಅನನ್ಯವಾಗಿರುವುದು ಕಡ್ಡಾಯ, ಪರಿಹಾರ ಧನವು ಕೇವಲ ಚಾಲನೆ ಪರವಾನಗಿ ಪ್ರಮಾಣ ಪತ್ರವನ್ನು ಹೊಂದಿರುವ ಹಾಗೂ ಬ್ಯಾಂಕ್ ಖಾತೆಗೆ ಡಿಬಿಟಿ ಮುಖಾಂತರವೇ ಸಂದಾಯವಾಗಬೇಕು ಎಂಬ ಕಡ್ಡಾಯ ಷರತ್ತು ಹಾಕಿಕೊಳ್ಳಲಾಗಿತ್ತು. ಅನರ್ಹರಿಗೆ ಸಹಾಯಧನ ಸಿಗಬಾರದು ಎಂಬ ಉದ್ದೇಶದಿಂದ ಷರತ್ತು ಅನಿವಾರ್ಯವಾಗಿತ್ತು ಎಂದು ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

ಒಂದು ವೇಳೆ ಆಟೋ, ಟ್ಯಾಕ್ಸಿ ಮಾಲಿಕರಿಗೆ ಸಂದಾಯವಾದಲ್ಲಿ ಅಥವಾ ಮಾಲಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಟೋ, ಟ್ಯಾಕ್ಸಿ ಹೊಂದಿದ್ದು ಚಾಲಕರಿಗೆ ಪರಿಹಾರ ಸಿಗದಂತಾಗುತ್ತದೆ ಎಂಬ ಕಾರಣಕ್ಕೆ ಸೂಕ್ಷ್ಮವಾಗಿ ಅವಲೋಕನ ನಡೆಸಲಾಗಿತ್ತು. ಡೂಪ್ಲಿಕೇಷನ್ ಅಥವಾ ಡಬಲ್ ಪೇಮೆಂಟ್ ಆಗದಂತೆ ಆಧಾರ್, ಪ್ಯಾನ್ ಕಾರ್ಡ್, ಬ್ಯಾಂಕ್ ಖಾತೆಗೆ ಅನ್ವಯವಾಗಿ ಲಿಂಕ್ ಆಗಿರುವ ಬಗ್ಗೆ ಗಮನಿಸಲಾಗಿತ್ತು ಎಂಬುದು ವಿಶೇಷ ಸಂಗತಿ.

ಸಾಂದರ್ಭಿಕ ಚಿತ್ರ

ಕಾರ್ಯದ ಬಗ್ಗೆ ಅಧಿಕಾರಿಗಳಿಗೆ ತೃಪ್ತಿ

ಒಂದು ವೇಳೆ ಈ ಕನಿಷ್ಠ ಷರತ್ತು ಹಾಕದಿದ್ದರೆ ಸರ್ಕಾರದ ಹಣ ದುರುಪಯೋಗ ಎಂಬ ಕೂಗು ಕೇಳಿಬರುತ್ತಿತ್ತು, ಈಗ ಸಣ್ಣ ಪುಟ್ಟ ಟೀಕೆ, ಆರೋಪ ಹೊರತುಪಡಿಸಿ ಅತಿ ದೊಡ್ಡ ಸಂಖ್ಯೆಯಲ್ಲಿ ಸಹಾಯಧನವನ್ನು ಕಾಲಮಿತಿಯಲ್ಲಿ, ಪಾರದರ್ಶಕವಾಗಿ ತಲುಪಿಸಲಾಗಿದ್ದು, ಈ ಕಾರ್ಯದ ಬಗ್ಗೆ ತೃಪ್ತಿ ಇದೆ ಎಂದು ಹಿರಿಯ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಮಂಗಳವಾರ 2 ಮಾರ್ಚ್ 2021
2 MARCH 2021
3c
ಬೆಂಗಳೂರು ಸಿಟಿ ಎಕ್ಸ್‌ಪ್ರೆಸ್

ಸುದ್ದಿ ಕಾರ್ನರ್

ನನಗೆ ಮತ್ತೊಂದು ಅವಕಾಶ ಕೊಡಿ

ಬೆಂಗಳೂರು: ನನಗೆ ಸುಪ್ರೀಂಕೋರ್ಟ್ ಶಾಪ ವಿಮೋಚನೆ ಆಗಬೇಕಾದರೆ ಚುನಾವಣೆ ಮೂಲಕವೇ ಆರಿಸಿ ಬರಬೇಕು, ಎಚ್.ಎಲ್. ಧರ್ಮೇಗೌಡರ ಅಕಾಲಿಕ ನಿಧನದಿಂದ ಖಾಲಿಯಾದ ಸ್ಥಾನದ ಮೂಲಕ ನಾನು ವಿಧಾನ ಸಭೆಯಿಂದ ವಿಧಾನ ಪರಿಷತ್‌ಗೆ ಬಂದರೆ ಶಾಪ ವಿಮೋಚನೆ ಆಗುತ್ತದೆ ಎಂದು ಅಡಗೂರು ಎಚ್. ವಿಶ್ವನಾಥ್ ಹೇಳಿದ್ದಾರೆ. ವಿಧಾನ ಸಭೆಯಿಂದ ನಡೆಯುವ ಉಪ ಚುನಾವಣೆ ಯಲ್ಲಿ ಸ್ಪರ್ಧಿಸುವ ವಿಚಾರವಾಗಿ ನಾನು ದೆಹಲಿ ವರಿಷ್ಠರು, ರಾಜ್ಯದ ಪ್ರಮುಖರು ಮತ್ತು ಸಿಎಂ ಗಮನಕ್ಕೆ ತಂದಿದ್ದೇನೆ. ಅವಕಾಶ ಮಾಡಿ ಕೊಡುವಂತೆ ಕೋರಿದ್ದೇನೆ ಎಂದು ಸುದ್ದಿಗಾರರಿಗೆ ತಿಳಿಸಿದರು. ಹೊಸದಾಗಿ ಆಯ್ಕೆ ಮಾಡಿ ಸರ್ಕಾರದಲ್ಲಿ ಜವಾಬ್ದಾರಿಗಳನ್ನು ಕೊಟ್ಟರೆ ನಾನು ನಿರ್ವಹಿಸಬಲ್ಲೆ. ಈಗಾಗಲೇ ಸಾಕಷ್ಟು ಜವಾಬ್ದಾರಿ ನಿರ್ವಹಿಸಿದ್ದೇನೆ. ನಾನು ಮಂತ್ರಿಯಾಗಿದ್ದಾಗ ಸರ್ಕಾರಿ ಶಾಲೆಗಳಿಗೆ ಕಾಂಪೌಂಡ್, ಶೌಚಗೃಹ ಸೌಲಭ್ಯ ಕಲ್ಪಿಸಿದ್ದೆ. ಹಾಗಾಗಿ ನನಗೆ ಒಂದು ಜವಾಬ್ದಾರಿ ಕೊಟ್ಟು ಶಾಪ ವಿಮೋಚನೆ ಮಾಡಿ, ವ್ಯತ್ಯಾಸಗಳನ್ನು ದಯವಿಟ್ಟು ಸರಿ ಮಾಡಿ ಕೊಡಿ ಎಂದು ಕೇಳುತ್ತಿದ್ದೇನೆ ಎಂದು ಹೇಳಿದರು.

'ಬಿಗ್‌ಬಾಸ್'ಗೆ ಕರೆದರೆ ಖಂಡಿತಾ ಹೋಗೇ ಹೋಗ್ತೇನೆ – ಎಚ್.ವಿಶ್ವನಾಥ್

ಅನುಗ್ರಹ ಯೋಜನೆ ಮರು ಜಾರಿಗೆ ಹೋರಾಟ

ಬೆಂಗಳೂರು: ರಾಜ್ಯದಲ್ಲಿ ಕುರಿ ಮತ್ತು ಜಾನುವಾರು ಸೇರಿ ಇನ್ನಿತರ ಸಾಕು ಪ್ರಾಣಿಗಳು ಸತ್ತರೆ ಪರಿಹಾರ ನೀಡುವ ಅನುಗ್ರಹ ಯೋಜನೆ ಮರು ಜಾರಿಗೆ ಅಧಿವೇಶನದಲ್ಲಿ ಹೋರಾಟ ಮಾಡುತ್ತೇನೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ರಾಜ್ಯ ಕುರಿ ಮತ್ತು ಮೇಕೆ ಸಾಕಣೆದಾರರ ಮಹಾಮಂಡಲ ಸೋಮವಾರ ನಗರದಲ್ಲಿ ಹಮ್ಮಿಕೊಂಡಿದ್ದ ಪತ್ರಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಸರ್ಕಾರ ಈ ಯೋಜನೆಯನ್ನು ಸ್ಥಗಿತಗೊಳಿಸಿದೆ. ಅವರಿಗೆ ಈ ಯೋಜನೆ ಮಹತ್ವದ ಬಗ್ಗೆ ಅರಿವು ಇಲ್ಲ. ಕೇವಲ ಕುರುಬರು ಮಾತ್ರ ಕುರಿಗಳನ್ನು ಸಾಕುತ್ತಿಲ್ಲ, ಎಲ್ಲ ವರ್ಗದ ಜನರು ಕುರಿಗಳನ್ನು ಸಾಕುತ್ತಿದ್ದಾರೆ. ಪ್ರವಾಹ ಹಾಗೂ ಮಳೆ ಸೇರಿ ಇನ್ನಿತರ ಕಾರಣಗಳಿಂದ ಕುರಿಗಳು ಸಾಯುತ್ತಿವೆ. ಪ್ರತಿ ಕುರಿಯ ಮೌಲ್ಯ 15 ಸಾವಿರ ರೂ.ನಿಂದ 20 ಸಾವಿರ ರೂ.ಇದೆ. ಕುರಿ ಸತ್ತಾಗ ಪರಿಹಾರ ನೀಡಲು ತಾವು ಮುಖ್ಯಮಂತ್ರಿ ಆಗಿದ್ದ ವೇಳೆ ಈ ಯೋಜನೆ ಜಾರಿಗೆ ತಂದಿದ್ದೆ ಎಂದರು. ಪ್ರತಿಭಟನೆಯಲ್ಲಿ ಮಾಜಿ ಸಚಿವರಾದ ಟಿ.ಬಿ. ಜಯಚಂದ್ರ, ಎಚ್.ಎಂ. ರೇವಣ್ಣ ಇತರಿದ್ದರು.

» ಸಿದ್ದರಾಮಯ್ಯ ಹೇಳಿಕೆ

ಎಫ್‌ಐಎಲ್‌ನಿಂದ ಮಹಿಳಾ ಸಬಲೀಕರಣ ಕಾರ್ಯಕ್ರಮ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಫಿನೋಲೆಕ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಎಫ್‌ಐಎಲ್) ತನ್ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಪಾಲುದಾರರಾದ ಮುಕುಲ್ ಮಾಧವ್ ಫೌಂಡೇಷನ್ (ಎಂಎಂಎಫ್) ಮೂಲಕ ಮಹಿಳಾ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಎಂಎಂಎಫ್ ಹಾಗೂ ಎಫ್‌ಐಎಲ್ ಕಾರ್ಯಕ್ರಮಗಳು: ●ಉಸ್ಮಾನಾಬಾದ್‌ನ ಶೇ. 60 ರೈತ ಮಹಿಳೆಯರು ಸಾಲ ಮರುಪಾವತಿಸಲು ಹಾಗೂ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಎಂಎಂಎಫ್ ಹಾಗೂ ಎಫ್‌ಐಎಲ್ ಸಹಾಯ ಮಾಡಿದೆ. 2019ರಲ್ಲಿ 312 ವಿಧವೆ ರೈತ ಮಹಿಳೆಯರಿಗೆ ಕೃಷಿ ವಿದ್ಯಾ ಕೇಂದ್ರದ ಸಹಯೋಗದೊಂದಿಗೆ ಉತ್ತಮ ಕೃಷಿ ಪದ್ಧತಿಗಳು, ಮಣ್ಣಿನ ಪರೀಕ್ಷೆ ಮತ್ತು ಕೊಯ್ಲು ನಂತರದ ಮಾರಾಟ ತಂತ್ರಗಳ ಬಗ್ಗೆ ಈ ತಿಳಿಸಿಕೊಡಲಾಗಿದೆ. ●ಮಹಾರಾಷ್ಟ್ರದ ಗ್ರಾಮೀಣ ಪ್ರದೇಶದ 100 ರೈತ ಮಹಿಳೆಯರಿಗೆ ಬಿಐಎಸ್ ಎಲ್‌ಡಿ ಸಹಯೋಗದೊಂದಿಗೆ ಯಾಂತ್ರಿಕೃತ ಕೃಷಿ ಮತ್ತು ಬೆಳೆ ಉತ್ಪಾದಕತೆ ಹೆಚ್ಚಿಸುವ ವಿಧಾನಗಳನ್ನು ತಿಳಿಸಿಕೊಡಲಾಗಿದ್ದು, ಜ್ಞಾನ ಮತ್ತು ಕೌಶಲ ಪಡೆದ ಈ 100 ಮಹಿಳೆಯರು ಇದೀಗ ಸಾವಿರ ರೈತ ಮಹಿಳೆಯರಿಗೆ ತರಬೇತಿ ನೀಡುತ್ತಿದ್ದಾರೆ. ●ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ಯುವ ಪರಿವರ್ತನ ಸಹಯೋಗದೊಂದಿಗೆ ಬುಡಕಟ್ಟು ಗ್ರಾಮದ ಕೈದಿಗಳಿಗೆ 500ಕ್ಕೂ ಅಧಿಕ ಶೌಚಗೃಹಗಳನ್ನು ನಿರ್ಮಿಸಿಕೊಡಲಾಗಿದ್ದು, 2019ರಲ್ಲಿ ಮಹಿಳೆಯರಿಗಾಗಿ ಸುರಕ್ಷಿತ, ಆರೋಗ್ಯಕರ ಮತ್ತು ಋತುಸ್ರಾವದ ಮನೆಗಳನ್ನು ನಿರ್ಮಿಸಿಕೊಡಲಾಗಿದೆ. ●ಎಚ್‌ಐವಿ ಪೀಡಿತ ತಾಯಂದಿರು ಹಾಗೂ ಲೈಂಗಿಕ ಕಾರ್ಯಕರ್ತೆಯರನ್ನು ಗುರುತಿಸಿ ಮಾಸಿಕ ಆಧಾರದ ಮೇಲೆ ದಿನಸಿಗಳನ್ನು ನೀಡುವ ಜತೆಗೆ, ಅವರ ಪುನರ್ವಸತಿಗಾಗಿ ಸಲಹೆ ನೀಡಲಾಗುತ್ತಿದೆ. ಜೀವನೋಪಾಯಕ್ಕಾಗಿ ಹೊಲಿಗೆ ಯಂತ್ರಗಳನ್ನು ಒದಗಿಸಲಾಗಿದ್ದು, ಅಂತರರಾಷ್ಟ್ರೀಯ ಖ್ಯಾತಿಯ ಗಾರ್ಮೆಂಟ್ ಹೌಸ್ 'ಕಾಶ್ಕಾ' ಅವರು ಸಿದ್ಧಪಡಿಸಿದ ವಸ್ತ್ರಗಳನ್ನೂ ಖರೀದಿಸುತ್ತಿದೆ. ●ಬಿಎಸ್‌ಸಿ ಅಗ್ರಿಕಲ್ಚರ್ ಹಾಗೂ ಬಿಎಸ್‌ಸಿ ನರ್ಸಿಂಗ್ ವಿಭಾಗದ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡುವ ಜತೆಗೆ, ಆಜಿ ಬಾಯಿ ಚಿ ಶಾಲಾ (ಅಜ್ಜಿಯರು ಶಾಲೆಗೆ ಹೋಗುತ್ತಾರೆ) ಎಂಬ ವಿಶಿಷ್ಟ ಕಾರ್ಯಕ್ರಮದ ಅಡಿಯಲ್ಲಿ ಪುಣೆಯ ಜುನ್ನಾರ್ ಜಿಲ್ಲೆಯ ಗ್ರಾಮೀಣ ಪ್ರದೇಶದ 100 ಹಿರಿಯ ಮಹಿಳೆಯರಿಗೆ ಸಾಕ್ಷರತಾ ಕೋರ್ಸ್‌ಗಳನ್ನು ನೀಡಲಾಗಿದೆ. ಸಾರಿಗೆ ವ್ಯವಸ್ಥೆಯ ಕೊರತೆ ಇದ್ದ ಮಹದಾ, ಸೋಲಾಪುರದ ವ್ಯಾಪ್ತಿಯ 100 ಬಾಲಕಿಯರಿಗೆ ಸೈಕಲ್‌ಗಳನ್ನು ನೀಡಲಾಗಿದೆ.

» ಎಂಎಂಎಫ್ ನೊಂದಿಗೆ ಸ್ತ್ರೀಯರಿಗೆ ಉತ್ತೇಜನ

» ಹಲವು ತರಬೇತಿ, ಹತ್ತಾರು ಯೋಜನೆಗಳು

ಲಿವ್ ಟು ಗಿವ್ ಎನ್ನುವುದು ನಮ್ಮ ಧ್ಯೇಯವಾಗಿದೆ. ಕಳೆದ ಐದು ವರ್ಷಗಳಲ್ಲಿ ಮಹಿಳೆಯರ ಮೇಲೆ ಗಮನ ಕೇಂದ್ರೀಕರಿಸಿರುವ ಫೌಂಡೇಷನ್ ಎಲ್ಲ ವರ್ಗ, ವಯೋಮಾನದ ಮಹಿಳೆಯರನ್ನು ಎಲ್ಲ ವಿಭಾಗಗಳಲ್ಲಿ ಸಕ್ರಿಯಗೊಳಿಸಲು ಹಾಗೂ ಸಬಲಗೊಳಿಸಲು ಪ್ರಯತ್ನಿಸುತ್ತಿದೆ.

| ರೀತು ಪ್ರಕಾಶ್ ಛಾಬ್ರಿಯಾ ಎಂಎಂಎಫ್ ನ ವ್ಯವಸ್ಥಾಪಕ ಟ್ರಸ್ಟಿ

ಸಂಸ್ಥೆಯ ಅತ್ಯಂತ ಪಾರದರ್ಶಕತೆಯಿಂದ ಸಮಾಜಕ್ಕೆ ಸೇವೆ ಸಲ್ಲಿಸಲು ಸಾಧ್ಯವಾಗಿದೆ. ನಮ್ಮ ಸಿಎಸ್‌ಆರ್ ಪಾಲುದಾರರೊಂದಿಗೆ ನಾವು ಉತ್ತಮ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತಿದೆ. ಎಂಎಂಎಫ್ ಕೈಗೊಳ್ಳುವ ಎಲ್ಲ ಕಾರ್ಯಕ್ರಮಗಳಲ್ಲಿ ನಮ್ಮ ತಂಡಗಳು ಭಾಗವಹಿಸುತ್ತಿವೆ.

| ಪಿ. ಪ್ರಕಾಶ್ ಎಫ್‌ಐಎಲ್‌ನ ಕಾರ್ಯನಿರ್ವಾಹಕ ಅಧ್ಯಕ್ಷ

ಐಐಎಸ್‌ಸಿಯಲ್ಲಿ ಕನ್ನಡಿಗರ ಕಡೆಗಣನೆ

85 ಹುದ್ದೆಗಳ ನೇಮಕಾತಿಯಲ್ಲಿ ಕನ್ನಡಿಗರಿಗೆ ಆದ್ಯತೆ ಇಲ್ಲ | ತೀವ್ರ ಆಕ್ರೋಶ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ)ಯಲ್ಲಿ 85 ಅಡಳಿತ ಸಹಾಯಕ ಹುದ್ದೆಗಳ ನೇಮಕಾತಿಯಲ್ಲಿ ಕನ್ನಡಿಗರನ್ನು ಹಾಗೂ 20 ವರ್ಷಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಮಾಡುತ್ತಿರುವ ನೌಕರರನ್ನು ಕಡೆಗಣಿಸುತ್ತಿರುವುದಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಮೈಸೂರು ಮಹಾರಾಜರು ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಲು ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪಿಸಿದ್ದಾರೆ. ಅಲ್ಲಿಂದ 1994ರ ವರೆಗೂ ಎಲ್ಲ ವಿಜ್ಞಾನ ಸಂಸ್ಥೆಯ ಸಿ ಮತ್ತು ಡಿ ವೃಂದದ ಹುದ್ದೆಗಳಿಗೆ ಕನ್ನಡಿಗರನ್ನು ಬಹುಪಾಲು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ವಿಜ್ಞಾನಿ ಪ್ರೊ.ಸಿ.ಎನ್. ರಾವ್ ಐಐಎಸ್‌ಸಿ ನಿರ್ದೇಶಕರಾಗಿದ್ದ ವೇಳೆ 500ಕ್ಕೂ ಅಧಿಕ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಕ ಮಾಡಿಕೊಂಡಿದ್ದರು. ಆದರೆ, ಅಕ್ಟೋಬರ್ 2020ರಲ್ಲಿ 85 ಅಡಳಿತಾತ್ಮಕ ಸಹಾಯಕ ಹುದ್ದೆಗಳ ನೇಮಕಾತಿಗೆ ಅರ್ಜಿ ಕರೆದಿದ್ದು, ಕನ್ನಡಿಗರನ್ನು ಕಡೆಗಣಿಸಲಾಗಿದೆ ಎಂಬ ಆರೋಪ ಕೇಳಿಬಂದಿದೆ.

250 ಕಾಯಂ ನೌಕರರು: 1995ರ ವೇಳೆಯಲ್ಲಿ 1,500ಕ್ಕೂ ಅಧಿಕ ಮಂದಿ ಅಡಳಿತಾತ್ಮಕ ಸಹಾಯಕ ಹುದ್ದೆಗಳಲ್ಲಿ ಕಾಯಂ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಸ್ತುತ ಸಂಸ್ಥೆಯಲ್ಲಿ ಕೇವಲ 250ಕ್ಕಿಂತ ಕಡಿಮೆ ಸಿಬ್ಬಂದಿ ಕಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಸ್ಥೆಯ ಉಪ ಕುಲಸಚಿವ ಜಯಪ್ರಕಾಶ್ ಅವರು ಆಂಧ್ರಪ್ರದೇಶದವರಾಗಿದ್ದು, ಕನ್ನಡಿಗರನ್ನು ಎಲ್ಲ ವಿಭಾಗದಲ್ಲಿಯೂ ಕಡೆಗಣಿಸುತ್ತಿದ್ದಾರೆ. ಈ ಬಗ್ಗೆ ಅಡಳಿತ